ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2410/2015

ಚಾಸಾ:1 ಪ್ರಾಸಾ:1

ದಿನಾಂಕ: 15.01.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ನಾಗರತ್ನ ಹವಲ್ದಾರ್ |
| ಗಂಡನ ಹೆಸರು | : | ಸದಾನಂದ ಹವಲ್ದಾರ್ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಅಂಗನವಾಡಿ ಕಾರ್ಯಕರ್ತೆ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಸ.ಸ.ಅ.ರವರಿಂದ:**

ಆರೋಪಿತರ ಪರಿಚಯವಿದೆ. ದಿ: 10-02-2015 ರಂದು ಬೆಳಿಗ್ಗೆ ಸುಮಾರು 10 ಗಂಟೆಯ ವೇಳೆಗೆ ನಾನು ಮನೆಯಲ್ಲಿ ಇದ್ದು, ಆ ಸಮಯದಲ್ಲಿ 1ನೇ ಆರೋಪಿ ಶಿವರಾಮ ಶೆಟ್ಟಿರವರು ಬಂದು ದಿ: 05-02-2015 ರಂದು ನಮ್ಮ ಸ್ವತ್ತಿನಲ್ಲಿ ಆಗಿದ್ದ ಸರ್ವೆ ಹಾಗೂ ಅದಕ್ಕೆ ಅಳವಡಿಸಿದ ಕಲ್ಲನ್ನು ತೆಗೆದು ಹಾಕುತ್ತಿದ್ದರು. ಅದನ್ನು 1ನೇ ಆರೋಪಿಯಲ್ಲಿ ನಾನು ಪ್ರಶ್ನಿಸಿದಾಗ ಆಗ ಆತ ನನ್ನನ್ನು ಅವಾಚ್ಯವಾಗಿ ನಿಂಧಿಸಿರುತ್ತಾರೆ. ನಂತರ ಸ್ಥಳಕ್ಕೆ 2 ರಿಂದ 4ನೇ ಆರೋಪಿತರು ಬಂದು ನನ್ನನ್ನು ಉದ್ದೇಶಿಸಿ ಅವಾಚ್ಯವಾಗಿ ನಿಂಧಿಸಿ, 1ನೇ ಆರೋಪಿ ನನ್ನ ಎದೆಗೆ ಕೈ ಹಾಕಿ ದೂಡಿ, ಉಳಿದ ಆರೋಪಿತರು ನನ್ನ ಜುಟ್ಟು ಹೊಡೆದು, ಬಟ್ಟೆಯನ್ನು ಎಳೆದಾಡಿ ಅದು ಹರಿದು ಹೋಗಿದ್ದು, ತೊಡೆಗೆ ಹೊಡೆದಿದ್ದು, ಅನಂತರ ಆರೋಪಿತರೆಲ್ಲರೂ ಸೇರಿ ಕೊಲ್ಲದೆ ಬಿಡುವುದಿಲ್ಲ ಎಂದು ಹೇಳಿ ಒಂದು ಕಲ್ಲನ್ನು ಎಸೆದಿದ್ದು ಅದನ್ನು ನಾನು ತಡೆಯಲು ಹೋಗಿ ನನ್ನ ಬೆರಳಿಗೆ ತಾಗಿರುತ್ತದೆ. ನಾನು ಪ್ರಜ್ಞಾಹೀನಳಾಗಿ ಅಲ್ಲೇ ಬಿದ್ದಿರುತ್ತೇನೆ. ಸ್ವಲ್ಪ ಸಮಯದ ನಂತರ ಯಾರೋ ಅಲ್ಲಿ ನಾನು ಬಿದ್ದಿರುವುದನ್ನು ನೋಡಿ ನನ್ನ ಗಂಡನಿಗೆ ತಿಳಿಸಿದ್ದು ಆತ ಸ್ಥಳಕ್ಕೆ ಬಂದು ಚಿಕಿತ್ಸೆಗಾಗಿ ನನ್ನನ್ನು ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಅಲ್ಲಿ 4

ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದು ದಿಃ 13-02-2015 ರಂದು ಬಿಡುಗಡೆಯಾಗಿರುತ್ತೇನೆ.

ಅನಂತರ ಪೊಲೀಸರು ಆಸ್ಪತ್ರೆಗೆ ಭೇಟಿ ನೀಡಿ ನನ್ನನ್ನು ವಿಚಾರಣೆ ಮಾಡಿ ದೂರು ಬರೆದುಕೊಂಡಿರತ್ತಾರೆ. ನಾನು ಸದ್ರಿ ದೂರನ್ನು ದಿನೇಶ್ ಶೇರಿಗಾರವರ ವಿರುದ್ದವೂ ಕೊಟ್ಟಿರುತ್ತೇನೆ.

ದಿಃ 01-04-2015 ರಂದು ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ಒಂದು ಮುಷ್ಟಿ ಗಾತ್ರದ ಕಲ್ಲನ್ನು ಪಂಚನಾಮೆ ಮೂಲಕ ವಶಕ್ಕೆ ಪಡೆದಿರುತ್ತಾರೆ. ಅನಂತರ ನನ್ನನ್ನು ವಿಚಾರಣೆ ಮಾಡಿರುತ್ತಾರೆ.

ಸಾಕ್ಷಿ ದೂರು ಮತ್ತು ಸ್ಥಳ ಪಂಚನಾಮೆಯಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಮತ್ತು 2 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಮತ್ತು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಕಲ್ಲು, ನೈಟಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುಮಾ1 ಮತ್ತು 2ನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ 2ರಿಂದ 4ನೇ ಆರೋಪಿತರ ಪರ ವಕೀಲರಾದ ಶ್ರೀ ಟಿ ಬಿ ಎಸ್ ರವರಿಂದಃ</u>**

ನನ್ನ ವಿರುದ್ದ ಈ ನ್ಯಾಯಾಲಯದಲ್ಲಿ 3 ಕೇಸುಗಳು ಬಾಕಿ ಇವೆ. ಯಾವ ದಿನಾಂಕದ ಘಟನೆಗಳೆಂದು ನಿಖರವಾಗಿ ಹೇಳಲಾಗುವುದಿಲ್ಲ. ಸೆಷನ್ ನ್ಯಾಯಾಯಾಲಯದಲ್ಲಿ ಒಂದು ಪ್ರಕರಣ ಬಾಕಿ ಇದೆ. ಸದ್ರಿ ಪ್ರಕರಣ ನಾನು, ನನ್ನ ಗಂಡ ಮತ್ತು ಮಗಳ ವಿರುದ್ದ ಬಾಕಿ ಇರುತ್ತದೆ. ಸೆಷನ್ ನ್ಯಾಯಾಲಯದ ಪ್ರಕರಣದಲ್ಲಿ ನನ್ನ ಗಂಡ 52 ದಿನ ಜೈಲಿನಲ್ಲಿ ಇದ್ದರು. ಅದರಲ್ಲಿ ನಮ್ಮ ವಿರುದ್ದ ಹೊರಸಿರುವ ಆರೋಪಿ ಏನೆಂದು ಗೊತ್ತಿರುತ್ತದೆ. ದಾರಿಯಲ್ಲಿ ಮಲ ಮೂತ್ರ ವಿಸರ್ಜನೆ ಮಾಡಿರುತ್ತೇವೆ ಎಂದು ಅಪಾದಿಸಿರುತ್ತಾರೆ ಎಂದರೆ ಸರಿ.

ಸರ್ವೆ ನಂಬ್ರ 27/5ಎಪಿ1 ನಲ್ಲಿ 14.05 ಸೆಂಟ್ಸ್ ಇದ್ದು ಅದರ ಚೆಕ್ಕು ಬಂಧಿ ಎಂದರೆ 3 ಭಾಗದಲ್ಲಿ ಶಿಲೆ ಕಲ್ಲಿನ ಪಾಯ ಇದ್ದು 1ನೇ ಆರೋಪಿ ಶಿವರಾಮ ಶೆಟ್ಟಿರವರ ಸ್ವತ್ತಿನ ಮಧ್ಯದಲ್ಲಿ ಯಾವುದೇ ಗುರುತು ಇರುವುದಿಲ್ಲ. ಸಾಕ್ಷಿ ಮುಂದುವರೆದು ದಿಃ 25-06-2024 ರಂದು 1ನೇ

ಆರೋಪಿ ಬಲವಂತವಾಗಿ ತಮ್ಮ ಪಟ್ಟಾ ಜಾಗದಲ್ಲಿ ಕೌಂಪೌಂಡು ಅಳವಡಿಸಿರುವುದಾಗಿ ನುಡಿಯುತ್ತಾರೆ. ಈ ವಿಚಾರವಾಗಿ ನನ್ನ ಗಂಡ ದಾವೆ ದಾಖಲಿಸಿದ್ದಾರೆ. ಆತ ಸುಮಾರು ಜನರ ವಿರುದ್ದ ದಾವೆ ದಾಖಲಿಸಿದ್ದಾರೆ. ನಮ್ಮ ವಿರುದ್ದ ದಾವೆ ಬಾಕಿ ಇದೆ ಎಂದರೆ ಸರಿ. ನಾವು ದಾಖಲಿಸಿರುವ ದಾವೆಯಲ್ಲಿ ನ್ಯಾಯಾಲಯದಿಂದ ನ್ಯಾಯಾಲಯದ ಆಯುಕ್ತರ ನೇಮಕವಾಗಿ ಮೋಜಣಿದಾರರೊಂದಿಗೆ ಸರ್ವೆ ಅಳತೆ ಮಾಡಿರುತ್ತಾರೆ ಎಂದರೆ ನೆನಪಿಲ್ಲ. ಅದರಂತೆ ನಮ್ಮ ಸ್ವತ್ತಿನ ಪೂರ್ವದಲ್ಲಿ ಶಿಲೆಕಲ್ಲಿನ ಪಾಯ ಇತ್ತು ಎಂದು ವರದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

1ನೇ ಆರೋಪಿ ಎಷ್ಟು ಅಡಿ ವಿಸ್ತೀರ್ಣವನ್ನು ಅತಿಕ್ರಮಿಸಿದ್ದಾರೆ ಎಂದು ಹೇಳಲಾಗುವುದಿಲ್ಲ. ನಮ್ಮ ಸ್ಥಳದಲ್ಲಿ ತೆಂಗಿನ ಮರಗಳು ಇವೆ. ಅದು ಫಲ ಬರುತ್ತದೆ. ಸದ್ರಿ ಸ್ವತ್ತನ್ನು 2008ರಲ್ಲಿ ಖರೀದಿಸಿರುತ್ತೇವೆ. 1ನೇ ಆರೋಪಿಯದ್ದು ಖಾಲಿ ಜಾಗ. ನಮ್ಮ ಸ್ವತ್ತಿನ ದಕ್ಷಿಣ ದಿಕ್ಕಿಗೆ 2 ರಿಂದ 4ನೇ ಆರೋಪಿತರ ಮನೆ ಬರುತ್ತದೆ. ಉತ್ತರಕ್ಕೆ ಎ.ಕೆ ಜೆ ರಸ್ತೆ ಇದೆ ಎಂದರೆ ಸರಿ. ಸದ್ರಿ ರಸ್ತೆ 2008 ರಿಂದ ಇರುವ ಬಗ್ಗೆ ಮಾತ್ರ ನನಗೆ ತಿಳಿದಿದೆ.

1ನೇ ಆರೋಪಿ ಸದ್ರಿ ದಿನ ನಮ್ಮ ಸ್ಥಳದಲ್ಲಿ ರಾಶಿ ಹಾಕಿದ್ದ ಕಲ್ಲುಗಳನ್ನು ತೆಗೆದು ಅವರ ಸ್ಥಳಕ್ಕೆ ಹಾಕಿರುತ್ತಾರೆ. ಅಲ್ಲಿ ಸುಮಾರು 3-4 ಲೋಡ್ ಕಲ್ಲು ಇತ್ತು. ಪಕ್ಕದಲ್ಲಿ ಕಂಪೌಂಡು ಇತ್ತು. ಮೊದಲಿಗೆ ಆವರಣ ಗೋಡೆ ಇರಲಿಲ್ಲ. ಪೂರ್ವ ಬದಿಯ ಆವರಣ ಗೋಡೆಯನ್ನು ವಿಸ್ತರಿಸಲು ನಾವು ತಯಾರಿಸಿದ್ದು ಎಂದು ನಿಪಿ-1ರಲ್ಲಿ ತಿಳಿಸಿಲ್ಲ. ಸದ್ರಿ ಕಲ್ಲುಗಳನ್ನು 1ನೇ ಆರೋಪಿ ಸ್ವತಹ ತೆಗೆದು ಹಾಕಿರುತ್ತಾರೆ. ಆಗ ಬೇರೆ ಯಾರೂ ಇರಲಿಲ್ಲ. ಆಗ 1ನೇ ಆರೋಪಿಯೊಂದಿಗೆ ಬೇರೆ ಯಾರೂ ಇರಲಿಲ್ಲ.

ಶೇಷಿ ಎಂಬುವರು 4ನೇ ಆರೋಪಿಯ ಅಕ್ಕ ಅಥವಾ ತಂಗಿ ಇರಬಹುದು. ಆಕೆ ವಿಕಲಚೇತನೆ. ಘಟನೆಯಾಗುವಾಗ ಆಕೆ ಬಂದಿರಲಿಲ್ಲ. 1ನೇ ಆರೋಪಿಗೆ ಯಾವುದೇ ಪೆಟ್ಟಾಗಿರುವುದಿಲ್ಲ. ಪೊಲೀಸರಿಗೆ ಗಲಾಟೆಯ ವೇಳೆ 1ನೇ ಆರೋಪಿ ಮತ್ತು ಶೇಷಿರವರಿಗೆ ಪೆಟ್ಟಾಗಿತ್ತು ಎಂದು ಹೇಳಿಕೆ ನೀಡಿಲ್ಲ. ಸಾಕ್ಷಿಗೆ ದಿಃ 06-04-2015ರ ಮುಂದುವರೆದ ಹೇಳಿಕೆಯ ಸದ್ರಿ ಭಾಗವನ್ನು ಓದಿ ಹೇಳಿದ್ದು

ಆಕೆ ಒಪ್ಪದ ಕಾರಣ ಅದನ್ನು ನಿಡಿ-1 ಎಂದು, ಸದ್ರಿ ಭಾಗವನ್ನು ನಿಡಿ-1(ಎ) ಎಂದು ಗುರುತಿಸಲಾಯಿತು.

ನನ್ನ ಮಗ ಹರೀಶ್ ಘಟನೆಯ ವೇಳೆಗೆ ಬೆಂಗಳೂರಿನಲ್ಲಿ ಇದ್ದ. ಘಟನೆಯಾದ ಮರುದಿನ ಆತ ಊರಿಗೆ ಬಂದಿರಬಹುದು. ನನ್ನ ಮಗ ಮತ್ತು ನನ್ನ ಗಂಡ 1ನೇ ಆರೋಪಿಯನ್ನು ಹಿಡಿದು ಎಳೆದಾಗ ಆತ ಕಲ್ಲಿನ ರಾಶಿಯ ಮೇಲೆ ಬಿದ್ದಿರುತ್ತಾರೆ ಎಂದು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಸದ್ರಿ ಭಾಗವನ್ನು ನಿಡಿ-1(ಬಿ) ಎಂದು ಗುರುತಿಸಲಾಯಿತು. ನಿಪಿ-1ನ್ನು ಪೊಲೀಸರೇ ಬರೆದಿರಬಹುದು. ಸದ್ರಿ ದಿನ ಸಂಜೆ 4 ಗಂಟೆಗೆ ನಿಪಿ-1ನ್ನು ಬರೆದಿರಬಹುದು. ಅದನ್ನು ಯಾರು ಬರೆದಿದ್ದಾರೆ ಎಂದು ನಿಖರವಾಗಿ ನೆನಪಿಲ್ಲ.

ನನಗೆ 1ನೇ ಆರೋಪಿ ಕಲ್ಲು ಎಸೆದಿರುತ್ತಾರೆ. ಅದು ಯಾವ ಗಾತ್ರದ ಕಲ್ಲು ಎಂದು ಹೇಳಲಾಗುವುದಿಲ್ಲ. ಅದು ಶಿಲೆ ಕಲ್ಲಿನ ತುಂಡು ಆಗಿರುತ್ತದೆ. 1ನೇ ಆರೋಪಿಗೆ 2015ರಲ್ಲಿ ಸುಮಾರು 70 ರಿಂದ 72 ವರ್ಷವಿರಬಹುದು. ಆತ ಹೃದ್ರೋಗಿಯಾಗಿದ್ದು ನಡೆಯುವ ಸ್ಥಿತಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. ಮುಮಾ1ರ ಕಲ್ಲು ನಮ್ಮ ಮನೆಯ ಅಂಗಳದಲ್ಲಿ ಇತ್ತು ಆ ವೇಳೆಗೆ ನಮ್ಮ ಮನೆಯಲ್ಲಿ 4 ಲೋಡು ಕಲ್ಲು ಇತ್ತು.

ಅರೋಪಿತರು ನಡೆದಾಡುವ ದಾರಿಯಲ್ಲಿ ನಾವು ಮಲ ಮೂತ್ರ ಮಾಡಿ ತೊಂದರೆ ಮಾಡುತ್ತಿದ್ದು ಆ ಬಗ್ಗೆ ಅವರು ನಮ್ಮ ವಿರುದ್ದ ಸಾಕಷ್ಟು ಪ್ರಕರಣಗಳನ್ನು ದಾಖಲಿಸಿದ್ದು ಅದಕ್ಕೆ ತಿರಸ್ಕಾರವಾಗಿ ಅವರ ವಿರುದ್ದ ಯಾವುದೇ ಘಟನೆ ಜರುಗಿಲ್ಲವಾದರೂ ಈ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1ನೇ ಆರೋಪಿತರ ಪರ ವಕೀಲರಾದ ಶ್ರೀ ಎಂ ಡಿ ಎಸ್ ರು ಮೇಲೆ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**